# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: **ದಿನಕರ್ ಜೋಶಿ**
■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಮನೋಹರ ಆಚಾರ್ಯ

## ಟಾಲ್‌ಸ್ಟಾಯ್ ಆಶ್ರಮದಲ್ಲಿ ಹರಿಲಾಲ

'ಇನ್ಸ್‌ಪೆಕ್ಟರ್' ಹರಿಲಾಲ ಹೇಳಿದ, 'ನಾನೊಬ್ಬ ಸತ್ಯಾಗ್ರಹಿಯಾಗಿದ್ದೇನೆ. ಕೂಲಿ ಮಾಡಲು ನನಗೆ ಸಂಕೋಚವಾಗಲಿ, ನಾಚಿಕೆಯಾಗಲಿ ಇಲ್ಲ. ನನ್ನ ಲಗ್ಗೇಜುಗಳನ್ನು ಹೊತ್ತು ಜೋಹಾನ್ಸ್‌ಬರ್ಗ್ ರಸ್ತೆಗಳಲ್ಲಿ ಹೋಗುವುದರಿಂದ ನನ್ನ ಗೌರವಕ್ಕೆ ಕುಂದು ಬರುವುದಿಲ್ಲ. ಆದರೆ ಬ್ರಿಟಿಷ್ ಸರ್ಕಾರವೇ ನಾಚಿಕೆಪಡಬೇಕು.'

ಹರಿಲಾಲ ಪ್ಲಾಟ್‌ಫಾರಂ ಮೇಲೆ ಬಿದ್ದಿದ್ದ ತನ್ನ ಲಗ್ಗೇಜುಗಳನ್ನು ಎತ್ತಿಕೊಂಡ. ಅವನ ಬಳಿ ಒಂದು ಸಣ್ಣ ಹಾಸಿಗೆ, ಟಿನ್‌ನ ಚಿಕ್ಕ ಪೆಟ್ಟಿಗೆ...ಕೆಲವು ಪುಸ್ತಕಗಳ ಒಂದು ಬಂಡಲ್...ಇಷ್ಟೇ ಇದ್ದವು.

'ಮಿಸ್ಟರ್ ಗಾಂಧಿ', ಆಂಗ್ಲ ಪೊಲೀಸ್‌ಅಧಿಕಾರಿ ಒರಟಾಗಿ ಹೇಳಿದ, 'ನಿನ್ನನ್ನು ಕೈಕೋಳ ಹಾಕಿ ಜೈಲಿಗೆ ಕರೆದೊಯ್ಯುತ್ತೇನೆ.'

'ಕೈಕೋಳ?' ಹರಿಲಾಲನಿಗೆ ಆಘಾತವಾಯಿತು, 'ಇನ್ಸ್‌ಪೆಕ್ಟರ್, ಸತ್ಯಾಗ್ರಹಿಯಾದವನು ಕೊಲೆಗಡುಕನಲ್ಲ ಅಥವಾ ಹೇಡಿಯಲ್ಲ. ನನಗೆ ಕೈಕೋಳ ಹಾಕುವ ನಿಮ್ಮ ಮಾತು ಶಿಷ್ಟ ಸಮಾಜದ ಕಾನೂನು ಅಲ್ಲ.'

ಆದರೆ ಇನ್ಸ್‌ಪೆಕ್ಟರ್ ಹರಿಲಾಲನ ಮಾತಿಗೆ ಗಮನ ಕೊಡಲಿಲ್ಲ. ದೂರದಲ್ಲಿ ನಿಂತಿದ್ದ ಭಾರತೀಯರ ಗುಂಪು ವೃದ್ಧಿಸುತ್ತಿತ್ತು. ಚಿಕ್ಕ ಗಾಂಧಿಗೆ ಜಯವಾಗಲಿ ಎಂಬ ಘೋಷಣೆ ಸಹ ಇಲ್ಲಿಗೆ ಕೇಳಿಸುತ್ತಿತ್ತು. ಹರಿಲಾಲನ ಬೆನ್ನಿಗೆ ಸಾಮಾನುಗಳನ್ನು ಕಟ್ಟಿ ನೇತು ಹಾಕಲಾಯಿತು. ಎರಡೂ ಕೈಗಳಿಗೆ ಕೈಕೋಳವನ್ನು ಹಾಕಲಾಯಿತು. ಆರು ಜನ ಪೊಲೀಸರಿಂದ ಸುತ್ತುವರೆದ ಹರಿಲಾಲ ನಗರದೊಳಗೆ ಪ್ರವೇಶಿಸಿದಾಗ, ಸ್ಟೇಷನ್‌ನಿಂದ ಹಿಡಿದು ಜೈಲಿನ ರಸ್ತೆಯ ಇಬ್ಬದಿಯಲ್ಲಿ ಭಾರತೀಯ ಸಮುದಾಯದ ಜನರು ನಿಂತು, 'ನಾಚಿಕೆಗೇಡುನಾಚಿಕೆಗೇಡು, 'ಚಿಕ್ಕ ಗಾಂಧಿಯವರಿಗೆ ಜಯವಾಗಲಿ' ಎಂಬ ಘೋಷಣೆಗಳನ್ನು ಕೂಗುತ್ತಿದ್ದರು. ಆಗಾಗ ಪೊಲೀಸರು ಗರ್ಜಿಸುವ ಮತ್ತು ಲಾಠಿಗಳಿಂದ ನೆಲವನ್ನು ಬಡಿಯುವ ಸದ್ದು ಕೇಳಿ ಬರುತ್ತಿತ್ತು.

ಹರಿಲಾಲ ಜೈಲಿನಲ್ಲಿ ಒಂಟಿಯಾದ. ಒಂಟಿತನ ಅವನನ್ನು ಏಕಾಂತವಾಸಕ್ಕೆ ತಳ್ಳಿತು. ಗುಲಾಬ ಮತ್ತು ರಾಮಿ ಅವನಿಗೆ ನಿರಂತರವಾಗಿ ನೆನಪಾಗುತ್ತಿದ್ದರು. ಬಾಪೂ ಅವರು ವಿದೇಶಕ್ಕೆ ಅಧ್ಯಯನ ಮಾಡಲು ಛಗನ್‌ಲಾಲ್‌ನನ್ನು ಆಯ್ಕೆ ಮಾಡಿದ ವಿಷಯ ಪದೇಪದೇ ಮುಳ್ಳಾಗಿ ಚುಚ್ಚುತ್ತಿತ್ತು. ಅವನು ಜೊತೆಯಲ್ಲಿ ತಂದಿದ್ದ ಪುಸ್ತಕಗಳಲ್ಲಿ ಭಗವದ್ಗೀತೆಯ ಪುಸ್ತಕವೊಂದಿತ್ತು. ಬಾಪೂ ಒತ್ತಾಯ ಮಾಡಿ ಆ ಪುಸ್ತಕವನ್ನು ಓದಲು ಶಿಫಾರಸು ಮಾಡಿದ್ದರು. ಹರಿಲಾಲ ಗೀತೆಯ ಪುಟಗಳನ್ನು ತಿರುವಿ ಹಾಕಿದ. ಬಾಪೂ ಅವರು ಸಾಮಾನ್ಯವಾಗಿ ಉದಾಹರಿಸುವ, ಕೆಲವು ಸಂದರ್ಭಗಳನ್ನು ಹೇಳುವಾಗ ಅವುಗಳನ್ನು ಭಗವದ್ಗೀತೆಯಿಂದ ಆಯ್ಕೆ ಮಾಡಿಕೊಳ್ಳುತ್ತಿದ್ದರು; ಈ ಗ್ರಂಥವನ್ನು ಹರಿಲಾಲ ಭಾರವಾದ ಮನಸ್ಸಿನಿಂದ ಓದಲು ಆರಂಭಿಸಿದ.

ಕೆಲವೇ ದಿನಗಳಲ್ಲಿ ಹರಿಲಾಲನ ಮನಸ್ಸಿನ ಅನುಭವಕ್ಕೆ ಬಂತು. ಈ ಬಾರಿಯ ಜೈಲುವಾಸ ತುಂಬಾ ಕಷ್ಟವಾಗುತ್ತಿತ್ತು. ಹರಿಲಾಲನ ಧೈರ್ಯವನ್ನು ಚೂರುಚೂರು ಮಾಡುವ ತೀರ್ಮಾನವನ್ನು ಆಂಗ್ಲ ಸರ್ಕಾರ ಮಾಡಿದಂತಿತ್ತು; ಜೈಲಿನ ಅಧಿಕಾರಿಗಳು ಆಹಾರ ಮತ್ತು ಮೂಲಭೂತ ಆವಶ್ಯಕತೆಗಳಿಂದಲೂ ಅವನನ್ನು ವಂಚಿತಗೊಳಿಸಿದ್ದರು. ಟಿನ್ ಹೊದಿಕೆಗಳ ಗೋದಾಮಿನಂಥ ಹರಕುಮುರುಕು ಕೋಣೆಯಲ್ಲಿ ಇಲಿಗಳಿರುವ ಮತ್ತು ಕೆಟ್ಟ ವಾಸನೆಯ ವಾತಾವರಣದಲ್ಲಿ ಅವನನ್ನು ಇರಿಸಲಾಗಿತ್ತು. ಹರಿಲಾಲ ಇಂಥ ಅಮಾನವೀಯತೆಯನ್ನು ವಿರೋಧಿಸಲು ತೀರ್ಮಾನಿಸಿ ಹೇಳಿದ, 'ನನ್ನ ವಾಸದ ಕೋಣೆಯನ್ನು ಬದಲಿಸಿ, ಇಲ್ಲದಿದ್ದಲ್ಲಿ ನನ್ನನ್ನು ಬೇರೆ ಜೈಲಿಗೆ ವರ್ಗಾಯಿಸಿ. ನಾನಿಂಥ ಅವಮಾನಕರ ಸ್ಥಿತಿಯಲ್ಲಿರಲಾರೆ.'

'ಮಿಸ್ಟರ್ ಗಾಂಧಿ,' ಬ್ರಿಟಿಷ್ ಅಧಿಕಾರಿ ಗಟ್ಟಿಯಾಗಿ ನಗುತ್ತಾ ಹೇಳಿದ, 'ಮಾನ್ಯರೇ, ನೀವಿಲ್ಲಿ ಪಿಕ್‌ನಿಕ್ ಆಚರಿಸಲು ಬಂದಿಲ್ಲ. ಸರ್ಕಾರ ನಿಮ್ಮ ಆತಿಥ್ಯವನ್ನು ಮಾಡುತ್ತಿದೆಯಲ್ಲ, ಇದೇ ದೊಡ್ಡ ವಿಷಯ.'.

ಈ ಉತ್ತರ ಕೇಳಿ ಹರಿಲಾಲ ಬೆಂಕಿಯಾದ.

'ಒಂದು ವೇಳೆ ಸರ್ಕಾರ ಇದನ್ನೇ ಆತಿಥ್ಯದ ನಿಯಮ ಎಂದು ತಿಳಿಯುವುದಾದರೆ, ನಿಮ್ಮ ಅತ್ಯಾಚಾರಿ ಸರ್ಕಾರಕ್ಕೆ, 'ಹರಿಲಾಲ, ನಿಮ್ಮ ಒಂದು ಅನ್ನದ ಅಗಳನ್ನೂ ಸಹ ತಿನ್ನುವುದಿಲ್ಲ' ಎಂದು ಹೇಳಿ...ಸರ್ಕಾರ ನನ್ನನ್ನು ಬೇರೆ ಜೈಲಿಗೆ ವರ್ಗಾಯಿಸುವವರೆಗೆ ನಾನು ಉಪವಾಸ ಸತ್ಯಾಗ್ರಹವನ್ನು ಮಾಡುತ್ತೇನೆ.' ಹರಿಲಾಲ ಸ್ವಯಂ ಪ್ರೇರಿತನಾಗಿ ಈ ಘೋಷಣೆಯನ್ನು ಮಾಡಿದ.

ಜೈಲು ಅಧಿಕಾರಿಗೆ ಆಶ್ಚರ್ಯವಾಯಿತು. ಕೈದಿಯೇ ಮುಂದೆ ಬಂದು ಹಸಿವೆಯಿಂದ ಸಾವನ್ನಪ್ಪುವ ಈ ವಿಚಿತ್ರ ಘೋಷಣೆ ಅವನ ಗಂಟಲಿನಿಂದ ಇಳಿಯಲಿಲ್ಲ. ಅವನು ಅದೆಷ್ಟೋ ಅಪರಾಧಿಗಳನ್ನು ನೋಡಿದ್ದ. ಹರಿಲಾಲನಂಥ ಹುಡುಗುತನದ ಘೋಷಣೆಯಿಂದ ಹೆದರುವ ಪ್ರಶ್ನೆಯೇ ಇರಲಿಲ್ಲ. ಹೊಟ್ಟೆ ಹಸಿದಾಗ, ಈ ಸ್ಫೂರ್ತಿ ಮತ್ತು ಉತ್ಸಾಹ ನಿಂತು ಹೋಗುವುದು ಎಂದು ಮುಂದಕ್ಕೆ ಹೋದ; ಹಸಿವು ಎಂಥವರನ್ನೂ ಸಹ ಭಿಕ್ಷುಕನನ್ನಾಗಿ ಮಾಡುತ್ತದೆ ಎಂಬುದು